Appointment of a Full-time Chairman to Pandavapura Co-operative Sugar Factory.

*Q.—289. Sri J. DEVIAH (Mandya).

Will the Government be pleased to state :—

(*a*) whether it is a fact that the present Chairman of the Pandavapura Co-operative Sugar Factory is not a whole time officer but he is a member of Legislative Assembly ;

(*b*) the amount of remuneration that the present Chairman of the Pandavapura Co-operative Sugar Factory, Ltd., is getting ;

(*c*) whether a car has also been provided to the Chairman in addition to the remuneration for his touring ;

(*d*) the difficulties that are in the way of appointing a permanent full-time Chairman to the above factory ?

A.—Sri KONDAJJI BASAPPA (Deputy Minister for Co-operation).—

(*a*) Yes.

(*b*) He is paid Rs. 500 per month to meet the cost of petrol charges.

(*c*) A car has been provided.

(*d*) There are no difficulties in the existing arrangements.

ಶ್ರೀ ಜೆ. ದೇವಯ್ಯ.—ಈ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಯಾರು, ಸ್ವಾಮಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಶ್ರೀ ಬಿ. ವೈ. ನೀಲೇ ಗೌಡ.

ಶ್ರೀ ಜೆ. ದೇವಯ್ಯ.—ಎಷ್ಟು ವರ್ಷ ಕಾಲ ಆ ಕೆಲಸವನ್ನು ಕೊಟ್ಟಿದ್ದೀರಿ, ಸ್ವಾಮಿ ?

Sri KONDAJJI BASAPPA.—No period is fixed.

ಶ್ರೀ ಎಸ್. ಎಂ. ಕೃಷ್ಣ.—ಅವರು ನಾಮಿನೇಟ್ ಆಗಿರುವವರೋ ಅಥವಾ ಬೋರ್ಡ್ ಆಫ್ ಡೈರಕ್ಟರ್ಸ್‌ನಿಂದ ಆರಿಸಲ್ಪಟ್ಟಿರುವವರೋ, ಸ್ವಾಮಿ ?

Sri KONDAJJI BASAPPA.—He is nominated as Director and also the Chairman.

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಸಹಕಾರ ಸಕ್ಕರೆ ಕಾರ್ಖಾನೆಯು ಅಧ್ಯಕ್ಷರನ್ನು until further orders ಎಂದು ನಾಮಿನೇಟ್ ಮಾಡಿತ್ತು. ಅಲ್ಲಿ ಚುನಾವಣೆ ನಡೆಯುವುದಕ್ಕೆ ಅವಕಾಶವಿರಲಿಲ್ಲ. ಈಚೆಗೆ ನಡೆದ ಜನರಲ್ ಬಾಡಿ ಮೀಟಿಂಗಿನಲ್ಲಿ ಚುನಾವಣೆಯು ಮೂಲಕ ಅಧ್ಯಕ್ಷರನ್ನು ಆರಿಸಬೇಕೆಂದು ಬೈಲಾ ತಿದ್ದುಪಡಿ ಮಾಡಿದ್ದಾರೆ. ಈಗಾಗಲೇ ಚುನಾವಣೆ ನಡೆದಿರಬಹುದು.

Sri K. LAKKAPPA.—When Government has got a share in the Society, it is not an office of profit ?

Mr. SPEAKER.—It is disallowed.

ಶ್ರೀ ಕೆ. ಲಕ್ಕಪ್ಪ.—ಇದರಲ್ಲಿ ಸರ್ಕಾರದ ಷೇರುಗಳಿವೆ, ಸ್ವಾಮಿ ?

Sri KONDAJJI BASAPPA.—That question does not arise. The Hon'ble Member may please put a separate question.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದರಲ್ಲಿ ಸರ್ಕಾರದ ಷೇರುಗಳೇನಾದರೂ ಇವೆಯೇ ?

Mr. SPEAKER.—Order, order.

ಶ್ರೀ ಜೆ. ದೇವಯ್ಯ.—ಅವರಿಗೆ ಪ್ರತಿ ತಿಂಗಳೂ ಸಂಬಳವೇನಾದರೂ ಇದೆಯೇ, ಸ್ವಾಮಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಸಂಬಳ ಕೊಡುತ್ತ ಇಲ್ಲ. ಅವರಿಗೆ ಕಾರು ಕೊಟ್ಟಿದ್ದಾರೆ. ಕಾರಿಗೆ ಬೇಕಾಗುವ ಪೆಟ್ರೋಲ್ ಮತ್ತು ಎಣ್ಣೆಗಾಗಿ ತಿಂಗಳಿಗೆ 500 ರೂಪಾಯಿ ಕೊಡುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಕಾರ್ಖಾನೆಯ ಅಧ್ಯಕ್ಷರು ಕಾರನ್ನು ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗಿ ಉಪಯೋಗಿಸಬಹುದಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಕಾರ್ಖಾನೆಯ ಕೆಲಸಕ್ಕೋಸ್ಕರ ಎಲ್ಲಿ ಬೇಕಾದರೂ ಅದರಲ್ಲಿ ಓಡಾಡಬಹುದು.

ಶ್ರೀ ಜೆ. ದೇವಯ್ಯ.—ವಿಧಾನಸಭೆಗೆ ಕಾರನ್ನು ತೆಗೆದುಕೊಂಡು ಬರುವಾಗ ಅದರ ಖರ್ಚನ್ನು ಯಾರು ವಹಿಸುತ್ತಾರೆ ?

Sri KONDAJJI BASAPPA.—I am not aware of it.

ಶ್ರೀ ಜೆ. ದೇವಯ್ಯ.—ಈ ಕಾರಿಗೆ ಡ್ರೈವರನ್ನು ಕೊಟ್ಟಿದ್ದೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಕೊಟ್ಟಿದ್ದೇವೆ.

ಶ್ರೀ ಜೆ. ದೇವಯ್ಯ.—ಕಾರ್ಖಾನೆಯ ಕೆಲಸಗಾರರಿಗೂ ಮತ್ತು ಅಧ್ಯಕ್ಷರಿಗೂ ಭಿನ್ನಾಭಿಪ್ರಾಯ ವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಇಲ್ಲ, ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಚೇರ್ಮನ್ ಆದವರು ಈ ಸಭೆಯ ಸದಸ್ಯರಾಗಿದ್ದು, ಈ ಮಾನ್ಯ ಸಭೆ ನಡೆಯುವ ಕಾಲದಲ್ಲಿ ಅವರಿಗೆ ಕೊಟ್ಟಿರುವ ಕಾರನ್ನು ಉಪಯೋಗಿಸುತ್ತಿರುವುದು ಕಂಡುಬಂದರೆ ಸರ್ಕಾರದವರು ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ?

Mr. SPEAKER.—It is purely hypothetical.

Tanks repaired under the Pilot Project Scheme in Bagepalli Taluk.

*Q.—302. Sri B. SUBBARAYAPPA (Bagepalli).—

Will the Government be pleased to state :—

(*a*) the number of tanks repaired so far under the pilot project scheme in Bagepalli Taluk ;

(*b*) the amount of grants sanctioned so far, for the same in the said Taluk ?

A.—Sri RAMAKRISHNA HEGDE (Minister for Development, Panchayatiaj and Co-operation).—

(*a*) Two.

(*b*) During 1962-63 :— Rs. 8,000.
During 1963-64 :— Rs. 50,000.

1-00 P.M.

ಶ್ರೀ ಬಿ. ಸುಬ್ಬರಾಯಪ್ಪ.—ಈ ಪೈಲಟ್ ಯೋಜನೆಯಲ್ಲಿ ಎರಡು ಕೆರೆಗಳನ್ನು ರಿಪೇರಿ ಮಾಡರಾಗಿದೆ ಎಂದು ಹೇಳಿದ್ದೀರಿ, ರಿಪೇರಿ ಮಾಡುವ ಉದ್ದೇಶವೇನು ?

ಶ್ರೀ ರಾಮಕೃಷ್ಣ ಹೆಗಡೆ.—ನಾದುರಸ್ತಿನಲ್ಲಿರುವ ಕೆರೆಗಳ ದುರಸ್ತು ಮಾಡಿ ನೀರಿಲ್ಲದಿರುವ ಕೆರೆಗಳಲ್ಲಿ ನೀರು ಕೊಡಿಸಬೇಕೆಂಬುದು. ಅಲ್ಲಿ ಒಟ್ಟು 11 ಕೆರೆಗಳ ದುರಸ್ತಿ ಕೆಲಸವನ್ನು ತೆಗೆದು ಕೊಂಡಿದ್ದಾರೆ ; ಈ ಯೋಜನೆಯ ಮತ್ತೊಂದು ಉದ್ದೇಶವೇನೆಂದರೆ, ವ್ಯವಸಾಯ ನಡೆಯುದೇ ಯಿರುವ ಕಾಲದಲ್ಲಿ ರೈತರಿಗೆ ಕೆಲಸಕ್ಕೆ ಅವಕಾಶ ಮಾಡಿಕೊಡಬೇಕು ; ಆ ಕೆಲಸ ರಚನಾತ್ಮಕ ಕೆಲಸವಾಗಬೇಕು ಮತ್ತು ವ್ಯವಸಾಯಕ್ಕೆ ಅನುಕೂಲವಾಗುವಂತಹ ಕೆಲಸವಾಗಿರಬೇಕು.

ಶ್ರೀ ಬಿ. ಸುಬ್ಬರಾಯಪ್ಪ.—ಕೆರೆಗಳಿಗೆ ತೂಬು ಇಡದೆ ರಿಪೇರಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಸುಬ್ಬರಾಯಪ್ಪ.—ಒಂದು ಕೆರೆಗೂ ತೂಬಿಲ್ಲದೆ ರಿಪೇರಿ ಕೆಲಸ ಮಾಡುತ್ತಿದ್ದಾರೆಂಬುದನ್ನು ಗಮನಕ್ಕೆ ತಂದಿದ್ದೇನೆ..... .....

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಕೆರೆ ಎಂದು ಹೇಳಿದರೆ ನೋಡುತ್ತೇನೆ.

ಶ್ರೀ ಬಿ. ಸುಬ್ಬರಾಯಪ್ಪ.—ಮೂರು ಕೆರೆಗಳಿಗೆ ತೂಬಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅಮೇಲೆ ಅವುಗಳ ಹೆಸರನ್ನು ತಿಳಿಸಿದರೆ ನೋಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಪೈಲಟ್ ಯೋಜನೆಯಲ್ಲಿ ಯಾವ ಕೆರೆಗಳನ್ನು ಧುರಸ್ತು_